ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ.ನಂ.2409/2015

ಪಿ.ಎಸ್.ಐ., ಕುಂದಾಪುರ
ಪೋಲೀಸ್ ಠಾಣೆ ..... ಪಿರ್ಯಾದುದಾರರು

ಃ ವಿರುದ್ಧ ಃ

1. ಶ್ರೀಮತಿ ನಾಗರತ್ನ ಹವಾಲ್ದಾರ್ ಹಾಗೂ ಮತ್ತಿಬ್ಬರು ..... ಆರೋಪಿತರು

......

ದೋಷಾರೋಪಣೆ

ಶ್ರೀಮತಿ ಲಾವಣ್ಯ ಹೆಚ್. ಎನ್. ಬಿ.ಎಸ್ಸಿ., ಎಲ್‌ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ ಆದ ನಾನು ಆರೋಪಿತರಾದ

1. ಶ್ರೀಮತಿ ನಾಗರತ್ನ ಹವಾಲ್ದಾರ್, 46 ವರ್ಷ,
ಗಂಡಃ ಸದಾನಂದ ಹವಾಲ್ದಾರ್,

2. ಸದಾನಂದ ಹವಾಲ್ದಾರ್, 56 ವರ್ಷ,
ತಂದೆಃ ದಿ. ದಾಸಪ್ಪ ಹವಾಲ್ದಾರ್,

3. ಹರೀಶ,
ತಂದೆಃ ಸದಾನಂದ ಹವಾಲ್ದಾರ್

1 ರಿಂದ 3ನೇಯವರ
ವಾಸಃ ಮನೆ ನಂಬ್ರ 215ಎ1,
ಶ್ರೀದೇವಿ ನರ್ಸಿಂಗ್ ಹೋಮ್ ಹತ್ತಿರ,
ವಡೇರಹೋಬಳಿ ಗ್ರಾಮ,
ಕುಂದಾಪುರ ತಾಲೂಕು.

ನಿಮಗೆ ಈ ಮೂಲಕ ಮಾಡುವ ದೋಷಾರೋಪಣೆ ಏನೆಂದರೆ

ದಾರಿ ಸಂಭಂಧದ ವಿವಾದದ ಕಾರಣ ದ್ವೇಷದಲ್ಲಿ ದಿನಾಂಕ 10-02-2015ರಂದು ಬೆಳಿಗ್ಗೆ 10.15 ಗಂಟೆಗೆ 1 ರಿಂದ 3ನೇ ಆಪಾದಿತರಾದ ನೀವುಗಳು ಸಮಾನ ಉದ್ದೇಶದಿಂದ ಪಿರ್ಯಾದಿ

ಶೇಷಿಯವರು  ದಾರಿಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ 1ನೇ ಆರೋಪಿತರಾದ ನೀವು ಪಿರ್ಯಾದಿದಾರರನ್ನುದ್ದೇಶಿಸಿ "ಬೇವರ್ಸಿ ಜಾತಿಯವುಗಳು ಎಷ್ಟು ಹೇಳಿದರೂ ಮಾರ್ಯದೆಯಿಲ್ಲ ಮತ್ತೆ ಇಲ್ಲೆ ಅಡ್ಡಾಡುತ್ತವೆ"ಎಂದು 2ನೇ ಆರೋಪಿತರಾದ ನೀವು ಸಾಕ್ಷಿ 2ನೇಯವರಿಗೆ 'ನೀನು ಆಸ್ಪತ್ರೆಯಲ್ಲಿ ಯಾರ ಯಾರದ್ಕೋ ಶ್ಯಾಟ ತೆಗೆಯಲು ಹೋಗುವವಳು ಏ ರಂಡೆ' ಎಂದು ಅವಾಚ್ಯ ಶಬ್ಧದಿಂದ ಬೈದು ಅವಮಾನಗೊಳಿಸಿರುತ್ತೀರೆಂದೂ, ಆ ಕಾರಣ ನಿಮ್ಮ ಈ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾಗಿದ್ದು, ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

2) ಮೇಲ್ಕಂಡ ದಿನ, 10.45 ಗಂಟೆಯ ಸಮಯಕ್ಕೆ ಹಾಗೂ ಸ್ಥಳದಲ್ಲಿ 1 ರಿಂದ 3ನೇಆರೋಪಿತರಾದ ನೀವು  ಸಾಕ್ಷಿ 4ನೇಯವರಿಗೆ ಹಲ್ಲೆ ನಡೆಸುತ್ತಿರುವಾಗ ಪಿರ್ಯಾದಿದಾರರು ಜೋರಾಗಿ ಬೊಬ್ಬೆ ಹಾಕಿದಾಗ 1ನೇ ಆರೊಪಿತರಾದ ನೀವು ಪಿರ್ಯಾದಿದಾರರನ್ನುದ್ದೇಶಿಸಿ 'ನೀನು ಈ ದಾರಿಯಲ್ಲಿ ಯಾಕೆ ಬಂದೆ'? ಎಂದು ಹೇಳಿ ನೆಲಕ್ಕೆ ಬಿಳಿಸಿ ಕಾಲಿನಿಂದ ತುಳಿದು ಹಾಗೂ ಸಾಕ್ಷಿ 2ನೇಯವರಾದ ಜಲಜಾಕ್ಷಿಯವರಿಗೂ ಸಹ ನೆಲಕ್ಕೆ ಬಿಳಿಸಿ ಎಲ್ಲರೂ ಕೈಯಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವನ್ನುಂಟು ಮಾಡಿರುತ್ತೀರೆಂದೂ, ಆ ಕಾರಣ ನಿಮ್ಮ ಈ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾಗಿದ್ದು, ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

3) ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 3ನೇ ಆರೋಪಿತರಾದ ನೀವು ಸಾಕ್ಷಿ 2ನೇಯವರಾದ ಜಲಜಾಕ್ಷಿಯವರಿಗೆ 2ನೇ ಆರೋಪಿತರಾದ ನೀವು ಮಾನಕ್ಕೆ ಸಾರ್ವಜನಿಕವಾಗಿ ಕುಂದುಂಟಾಗುವ ರೀತಿಯಲ್ಲಿ ಭುಜಕ್ಕೆ ಕೈ ಹಾಕಿ ನೈಟಿಯನ್ನು ಎಳೆದು ಹರಿದು ಮಾನಹಾನಿ ಮಾಡಿರುತ್ತೀರೆಂದೂ, ಆ ಕಾರಣ ನಿಮ್ಮ ಈ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ 354ರ ಕೆಳಗೆ ಶಿಕ್ಷಾರ್ಹವಾಗಿದ್ದು, ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ.

4) ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ರಿಂದ 3ನೇ ಆರೋಪಿತರಾದ  ನೀವು ಸಾಕ್ಷಿ 2ನೇಯವರನ್ನು ಉದ್ದೇಶಿಸಿ  "ನೀನು ಆಸ್ಪತ್ರೆಯಲ್ಲಿ ಯಾರ ಯಾರದ್ದೋ ಶ್ಯಾಟ ತೆಗೆಯಲು

ಹೋಗುವವಳು ಏ ರಂಡೆ ನಿನ್ನ ಜಾಗ ಅಲ್ಲಿ ಉಂಟು, ನನ್ನ ಜಾಗದಲ್ಲಿ ಕಾಲು ಹಾಕಿದರೆ ನಿಮ್ಮ ಕಾಲು ಮುರಿದು ಹಾಕುತ್ತೇನೆ" ಎಂದು ಬೆದರಿಕೆ ಹಾಕಿರುವಿರೆಂದೂ ಆ ಕಾರಣ ನಿಮ್ಮ ಈ ಕೃತ್ಯವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ 34 ರ ಕೆಳಗೆ ಶಿಕ್ಷಾರ್ಹವಾಗಿದ್ದು, ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುವಿರಿ

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

(ಮೇಲ್ಕಂಡ ದೋಷರೋಪಣೆಯನ್ನು ಆರೋಪಿತರಿಗೆ ತಿಳಿಯುವ ಭಾಷಯಲ್ಲಿ ಓದಿ ಹೇಳಿದ್ದು ಕೇಳಿ ಸರಿಯೆಂದು ದಿನಾಂಕ 19.01.2017 ರಂದು ಸಹಿ ಮಾಡಿರುತ್ತಾರೆ.)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ